**ಇಂದು ದಿಃ 01-07-2023 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ವಾದಿ ಪರ ವಕೀಲರು ತಮ್ಮ ಪರವಾಗಿ ಪಾಟೀ ಸವಾಲು ಇರುವುದಿಲ್ಲ ಎಂದು ಪ್ರಾರ್ಥಿಸಿದ್ದರೆ.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ. ಎಚ್ ವಕೀಲರಿಂದಃ**

ನನ್ನ ಮದುವೆ 38 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ಮದುವೆಯ ಕಾಲಕ್ಕೆ ನನ್ನ ತಂದೆ ಮತ್ತು ಆತನ ಸಹೋದರರು ಒಟ್ಟು ಕುಟುಂಬದಲ್ಲಿದ್ದರು. ನನ್ನ ಮದುವೆಯಾಗಿ 2 ತಿಂಗಳ ನಂತರ ನನ್ನ ತಂದೆ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡಿದ್ದಾರೆ. ನನ್ನ ತಂದೆ ಮತ್ತು ಆತನ ಸಹೋದರರು ದಿನಾಂಕಃ31-10-1986 ರಂದು ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿ. ನಮ್ಮ ತಂದೆಗೆ ವಿಭಾಗ ಮೂಲಕ ಯಾವ ಆಸ್ತಿಗಳು ಬಂದಿವೆಂದು ನನಗೆ ಗೊತ್ತಿದೆ. 2 ಎಕರೆ 27 ಗುಂಟಾ, 1 ಮುಕ್ಕಾಲು ಎಕರೆ, ಒಂದು ಮನೆ, ಒಂದು ನಿವೇಶನ ಹಾಗೂ ಒಂದು ಕಣ ಮತ್ತು ಸರ್ಕಾರದಿಂದ ಒಂದು ನಿವೇಶನ ಮಂಜೂರಾಗಿ ಬಂದಿರುತ್ತದೆ. ನನ್ನ ತಂದೆ ಮತ್ತು ಆತನ ಸಹೋದರರು ವಿಭಾಗ ಪತ್ರ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ವಿಭಾಗ ಪತ್ರವನ್ನು ವಾದಿ ಹಾಜರುಪಡಿಸಿದ್ದಾರೆಂದರೆ ಸಾಕ್ಷಿಯು ನಾನು ಶಾಲೆ ಕಲಿತಿರುವುದಿಲ್ಲ ಆದ್ದರಿಂದ ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಂದೆ ಮುರಿಗೆಪ್ಪ ಎಂದರೆ ಸರಿ. ಮುರಿಗೆಪ್ಪ, ಬಸಪ್ಪ, ಪಂಚಪ್ಪ, ನಾಗರಾಜಪ್ಪ ಮತ್ತು ಮಲ್ಲೇಶಪ್ಪ ಸಹೋದರರು ಎಂದರೆ ಸರಿ. 5 ಜನ ಸಹೋದರರು ಸೇರಿ ನಿ.ಪಿ-31 ರಂತೆ ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗ ಪತ್ರದ ಮೂಲಕ ನಮ್ಮ ತಂದೆಗೆ ಸರ್ವೆ ನಂಬರ್-18/ಪಿ ರಲ್ಲಿ ಕ್ಷೇತ್ರ 2 ಎಕರೆ 30 ವರೆ ಗುಂಟಾ, ಸರ್ವೆ ನಂಬರ್-29/ಪಿ ರಲ್ಲಿ ಕ್ಷೇತ್ರ 1 ಎಕರೆ 31 ಗುಂಟಾ, ಹಂಚಿನ ಮನೆ 36X19 ಅಡಿ, 36X9 ಅಡಿ ಕಣ, 66X29 ಅಡಿ ಕಣ ನಮ್ಮ ತಂದೆಯ ಹಿಸ್ಸೆಗೆ ಬಂದಿವೆ ಎಂದರೆ ಸರಿ. ದಿನಾಂಕಃ31-10-1986 ರಲ್ಲಿ ವಿಭಾಗ ಪತ್ರ ಮಾಡಿಕೊಂಡಿದ್ದಾರೆಂದರೆ ಸರಿ. ಹಿಸ್ಸೆ ಮಾಡಿಕೊಳ್ಳುವುದಕ್ಕಿಂತ 2 ತಿಂಗಳ ಮೊದಲು ಅಂದರೆ ದಿನಾಂಕಃ15-08-1986 ರಂದು ಸರ್ಕಾರದವರು ಖಾಲಿ ಜಾಗದ ಹಕ್ಕು ಪತ್ರ ಕೊಟ್ಟಿದ್ದಾರೆಂದರೆ ಸರಿ. 1 ನೇ ಪ್ರತಿವಾದಿಗೆ ಸರ್ಕಾರದವರು ಮಂಜೂರು ಮಾಡಿದ್ದಾರೆಂದರೆ ಸರಿ. 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದ ಖುಲ್ಲಾ ಜಾಗವನ್ನು ವಿಭಾಗ ಪತ್ರದಲ್ಲಿ ಸೇರಿಸಲು ಯಾವುದೇ ತೊಂದರೆ ಇರಲಿಲ್ಲ. ಖಾಲಿ ಜಾಗವು 1 ನೇ ಪ್ರತಿವಾದಿಯ ಸ್ವಂತ ಆಸ್ತಿಯಾಗಿರುವುದರಿಂದ ವಿಭಾಗ ಪತ್ರದಲ್ಲಿ ಸೇರಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

ಸಾಕ್ಷಿಗೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತೋರಿಸಲಾಗಿ, ಸಾಕ್ಷಿ ಅದರಲ್ಲಿ ಏನು ಬರೆದಿದೆಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ವಕೀಲರ ಮೂಲಕ ಹಾಜರಾಗಿ, ತಕರಾರನ್ನು ಸಲ್ಲಿಸಿದ್ದೇನೆಂದರೆ ಸರಿ. ನಾನು, ರುದ್ರಮ್ಮ ಮತ್ತು ಯಶೋಧ ಎನ್ನುವವರು ಸೇರಿ, ಒಟ್ಟಿಗೆ ನ್ಯಾಯಾಲಯಕ್ಕೆ ಪ್ರತಿವಾದ ಪತ್ರ ಸಲ್ಲಿಸಿದ್ದೇವೆಂದರೆ ಸಾಕ್ಷಿಯು ವಕೀಲರ ಕಛೇರಿಗೆ ಕರೆಯಿಸಿ ನಮ್ಮ ಸಹಿ ಪಡೆದಿದ್ದಾರೆ. ಅದರಲ್ಲಿ ಏನು ಬರೆದಿದೆಂದು ಗೊತ್ತಿಲ್ಲ. ನಾವು 3 ಜನ ವಕೀಲರ ಆಫೀಸ್ ಗೆ ಹೋಗಿ ಪ್ರತಿವಾದ ಪತ್ರಕ್ಕೆ ಸಹಿ ಮಾಡಿದ್ದೇವೆಂದರೆ ಸರಿ. ಪ್ರತಿವಾದ ಪತ್ರದಲ್ಲಿ ಬರೆದ ವಿಷಯಗಳು ಸತ್ಯವಾಗಿವೆಂದು ನನ್ನ ಪರವಾಗಿ ಮತ್ತು ಉಳಿದ ಪ್ರತಿವಾದಿಯರಾದ ರುದ್ರಮ್ಮ ಮತ್ತು ಯಶೋಧ ರವರ ಪರವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆಂದರೆ ಸರಿ. ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳನ್ನು ಕನ್ನಡದಲ್ಲಿ ಓದಿ ಹೇಳಿದ ನಂತರ, ಸಹಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ನಾನು, ರುದ್ರಮ್ಮ ಮತ್ತು ಯಶೋಧ ವಕೀಲರ ಕಛೇರಿಗೆ ಬಂದಾಗ, 1 ನೇ ಪ್ರತಿವಾದಿಯು ಸಹ ಹಾಜರಿದ್ದ ಎಂದರೆ ಸರಿ. 1 ನೇ ಪ್ರತಿವಾದಿಯು ಸಹ ಅದೇ ದಿನ ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರ ಸಲ್ಲಿಸುವುದಕ್ಕಿಂತ ಮೊದಲೇ, ವಕೀಲರಿಗೆ ವಕಾಲತ್ ನಾಮೆಯನ್ನು ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ. ದಿನಾಂಕಃ21-11-2014 ರಂದು ನಾನು, ರೇಣುಕಾ, ಯಶೋಧ ಹಾಗೂ ಕೆಂಚಪ್ಪ ಎನ್ನುವವರು ವಕೀಲರ ಕಛೇರಿಗೆ ಹೋಗಿ ಸಹಿ ಮಾಡಿಕೊಟ್ಟಿದ್ದೇವೆಂದರೆ ಸಾಕ್ಷಿಯು, ವಕೀಲರ ಕಛೇರಿಗೆ ಹೋಗಿ ಸಹಿ ಮಾಡಿಕೊಟ್ಟಿದ್ದೇವೆ ಆದರೆ ಅದು ಏಕೆ ಕೊಟ್ಟಿದ್ದೇವೆಂದು ನನಗೆ ಗೊತ್ತಿಲ್ಲ. ವಕೀಲರು ವಕಾಲತ್ ನಾಮೆಯ ಮೇಲೆ ಸಹಿ ತೆಗೆದುಕೊಳ್ಳುವಾಗ ಅದರ ವಿಚಾರ ನಮಗೆ ತಿಳಿಸಿದ್ದಾರೆ ಎನ್ನುವುದು ಸರಿಯಲ್ಲ. ನಾನು ಪ್ರತಿವಾದ ಪತ್ರ ಸಲ್ಲಿಸಿದ್ದು, ಅದಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ಹೇಳಲು ಬರುವುದಿಲ್ಲ ಎನ್ನುವುದು ಸರಿಯಲ್ಲ. ನಮ್ಮ ಪ್ರತಿವಾದ ಪತ್ರದಲ್ಲಿ 1 ನೇ ಪ್ರತಿವಾದಿ, ಸಲ್ಲಿಸಿದ ಪ್ರತಿವಾದ ಪತ್ರ ಸತ್ಯವಾಗಿರುತ್ತದೆಂದು ಹೇಳಿ ಅದನ್ನು ಒಪ್ಪಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಾದಿ ಮತ್ತು 1 ನೇ ಪ್ರತಿವಾದಿಯ ಮಧ್ಯದಲ್ಲಿ 1999 ರಲ್ಲಿ ವಿಭಾಗ ಮಾಡಿಕೊಂಡು, ಬೇರೆ ಬೇರೆ ಸಾಗುವಳಿ ಮಾಡುತ್ತಿದ್ದಾರೆಂದು ಹೇಳಿ ಬರೆಯಿಸಿದ್ದೇನೆ ಎನ್ನುವುದು ಸರಿಯಲ್ಲ. ದಿನಾಂಕಃ05-03-1992 ರಂದು ಕೋಡಿಹಳ್ಳಿ ಗ್ರಾಮದ ಸರ್ವೆ ನಂಬರ್-63/ಪಿ ರಲ್ಲಿ ಕ್ಷೇತ್ರ 4 ಎಕರೆ 28 ವರೆ ಗುಂಟಾ ಜಮೀನನ್ನು 1 ನೇ ಪ್ರತಿವಾದಿ ರೂ.32 ಸಾವಿರಗಳಿಗೆ ಪಾಲಾಕ್ಷಪ್ಪ ಮತ್ತು ಅವರ ಮಕ್ಕಳಿಂದ ಖರೀದಿಸಿದ್ದಾರೆಂದು ಹೇಳಿ ಬರೆಯಿಸಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಆಸ್ತಿಯು 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳ ಸ್ವಯಾರ್ಜಿತ ಆಸ್ತಿಯೆಂದು ಹೇಳಿ ಬರೆಯಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.